ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಗಮನಕ್ಕೆ ಬಂದಿದೆ

ಆ) ಅನಧಿಕೃತ ಬಡಾವಣೆ ಯಾವುದೂ ಇರುವುದಿಲ್ಲ.

ಇ) ಅನಧಿಕೃತ ನಿವೇಶನಗಳು ಬಾರದಂತೆ ಈ ಕೆಳಗೆ ವಿವರಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಸ್ಥಳೀಯ ಪತ್ರಿಕೆಗಳ ಮೂಲಕ ಇಂಥ ನಿವೇಶನ ತಯಾರಿಕೆಗೆ ವಿರುದ್ಧ ಎಚ್ಚರಿಕೆ ನೋಟೀಸುಗಳನ್ನು ಕೊಡಲಾಗಿದೆ.

2. ಇಂಥ ಅನಧಿಕೃತ ನಿವೇಶನಗಳನ್ನು ಹೊಂದುರ ನಿವೇಶನದಾರರಿಗೆ ಮುಂದಾಗ ಬಹುದಾದ ಸಮಸ್ಯೆಗಳ ಕುರಿತು ತುರ್ತು ಮಾಹಿತಿ ನೀಡಿ ಎಚ್ಚರಿಕೆ ನೀಡಲಾಗಿದೆ.

3. ಅನಧಿಕೃತ ನಿವೇಶನ : ಬಡಾವಣೆಗಳಿಗೆ ಯಾವುದೇ ಪ್ರತ್ಯೇಕ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗುತ್ತಿಲ್ಲ.

4. ಹಲವು ಸರ್ಕಾರಿ ಹಾಗೂ ಮಹಾನಗರಸಭೆಯ ಒಡೆತನದ ಜಮೀನುಗಳಲ್ಲಿ ಬಂದ ಅನಧಿಕೃತ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ.

ವಿಷಯ :- ರಾಜ್ಯದಲ್ಲಿಯ ಮಹಾನಗರ ಸಭೆಗಳ ವಾರ್ಷಿಕ ಆದಾಯ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2350 (379)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯ ವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿಯ ಮಹಾನಗರ ಸಭೆಗಳ ಸಂಖ್ಯೆ ಎಷ್ಟು? ಅವುಗ ವಿವಿಧ ಮೂಲಗಳಿಂದ ಬರುವ ವಾರ್ಷಿಕ ಆದಾಯ ಮತ್ತು ಖರ್ಚಿನ ವಿವರಗಳನ್ನು ನೀಡುವುದ

ಆ) ಮಹಾನಗರ ಸಭೆಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗಳು ಸಮಪೆ ವಾಗಿದೆಯೇ ಹೇಗೆ, ನೀರಿನ ಪೂರೈಕೆಯು ಮಹಾನಗರಸಭೆ ನೋಡಿಕೊಳ್ಳುವುದೇ ಹೇ ಇದ್ದಲ್ಲಿ ಅವುಗಳ ನೀರು ವಿತರಣೆಯ ವ್ಯವಸ್ಥೆ ಹೇಗೆ ಇದೆ ಎಂಬುದನ್ನು ತಿಳಿಸಿರಿ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಸಂಖ್ಯೆ 7

ಮಹಾನಗರ ಸಭೆಗಳ ವಾರ್ಷಿಕ ಆದಾಯ ಮತ್ತು ವೆಚ್ಚ ಈ ಕೆಳಕಂಡಂತಿರುತ್ತ

ಮಹಾನಗರಪಾಲಿಕೆ	ಆದಾಯ ಲಕ್ಷ ರೂ. ಗಳಲ್ಲಿ	ವೆಚ್ಚ
ಶಿವಮೊಗ್ಗ- ಭದ್ರಾವತಿ	5616-59	5818-59
ಮೈಸೂರು	2380-94	2506-21
ಗುಲ್ಬರ್ಗ	4267-67	3785-35
ಬೆಳಗಾಂ	1300-98	1294-96
ಮಂಗಳೂರು	1169-65	1068-85
ಹುಬ್ಬಳ್ಳಿ - ಧಾರವಾಡ	2333-11	2333-11
ಬೆಂಗಳೂರು	19227-83	19227-83

ಆ) ಮಹಾನಗರಸಭೆಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಮಹಾನಗರಪಾಲಿಕೆ	ವಿವರಗಳು
ಶಿವಮೊಗ್ಗ-ಭದ್ರಾವತಿ	ಹೌದು. ಸಂಪೂರ್ಣವಾಗಿ ನಗರಪಾಲಿಕೆ ಯಿಂದ ನಿರ್ವಹಿಸಲಾಗುತ್ತಿದೆ. ವಿತರಣಾ ಕಾರ್ಯ ತೃಪ್ತಿಕರವಾಗಿದೆ.
ಮೈಸೂರು	ನೀರಿನ ಪೂರೈಕೆಯನ್ನು ಮೈಸೂರು ಮಹಾನಗರಪಾಲಿಕೆ ನೋಡಿಕೊಳ್ಳುತ್ತಿದೆ. ನೀರು ಸರಬರಾಜು ವ್ಯವಸ್ಥೆ ಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿರ್ವಹಿಸುತ್ತಿದೆ.
ಬೆಂಗಳೂರು	ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ವ್ಯವಸ್ಥೆಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಈ ಕಾರ್ಯವನ್ನು ನಿರ್ವಹಿಸುತ್ತಿದೆ.
ಬೆಳಗಾಂ	ಸಗಟು ನೀರು ಸರಬರಾಜನ್ನು ಕರ್ನಾಟಕದ ಜಲ ಮಂಡಳಿಯವರು ನಿರ್ವಹಿಸುತ್ತಾರೆ. ನೀರಿನ ಸರಬ ರಾಜನ್ನು ಜನತೆಗೆ ಮಹಾನಗರಸಭೆ ನಿರ್ವಹಿಸುತ್ತದೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯು ಸಮರ್ಪಕವಾಗಿದೆ.

ಗುಲ್ಬರ್ಗ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಕರ್ನಾಟಕದ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯವರಿಗೆ ಹಸ್ತಾಂತರಿಸಲಾಗಿದೆ.

ಮಂಗಳೂರು ಮಂಗಳೂರು ನಗರಪಾಲಿಕೆಯು ಜಲಮಂಡಳಿಯಿಂದ ಸಗಟು ರೂಪದಲ್ಲಿ ನೀರನ್ನು ಪಡೆಯುತ್ತಿದೆ. ಪಡೆದು ನೀರು ತನ್ನ ಸ್ಥಾವರದಿಂದ ಪಡೆದ ನೀರು ಈ ಎಲ್ಲಾ ನೀರನ್ನು ಮಹಾನಗರಪಾಲಿಕೆಯೇ ವಿತರಣೆ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದೆ.

ಹುಬ್ಬಳ್ಳಿ-ಧಾರವಾಡ ಈ ಕೆಳಗಿನ ಯೋಜನೆಗಳಿಂದ ನೀರು ಸರಬರಾಜು ಆಗುತ್ತಿದೆ.

1) ಮಲಪ್ರಭಾ ಕುಡಿಯುವ ನೀರಿನ ಯೋಜನೆ

2) ನೀರಸಾಗರ ಕುಡಿಯುವ ನೀರಿನ ಯೋಜನೆ

3) ಉಣಕಲ್ ಕೆರೆ ಕುಡಿಯುವ ನೀರಿನ ಯೋಜನೆ ಬೃಹತ್ ಪ್ರಮಾಣದ ನೀರನ್ನು ಜಲಮಂಡಳಿಯು ಮಹಾನಗರಸಭೆಗೆ ಪೂರೈಸುತ್ತಿದ್ದು, ನಾಗರೀಕರಿಗೆ ನೀರಿನ ವಿತರಣೆಯನ್ನು ಮಹಾನಗರಸಭೆಯು ನೋಡಿಕೊಳ್ಳುತ್ತಿದೆ. ಸಧ್ಯದ ವ್ಯವಸ್ಥೆಯಲ್ಲಿ ಈ ನಗರದಲ್ಲಿ ಎರಡು ದಿನಕ್ಕೆ ಒಮ್ಮೆಯಂತೆ ನೀರು ಸರಬರಾಜು ಆಗುತ್ತಿದ್ದು ವಿತರಣಾ ವ್ಯವಸ್ಥೆಯಲ್ಲಿ ಕೆಲವು ಅಸಮರ್ಪಕತೆ ಕಾರಣಗಳಿಂದಾಗಿ ನಗರದ ಎಲ್ಲಾ ಪ್ರದೇಶಗಳಿಗೂ ನೀರು ಸರಬರಾಜಿನಲ್ಲಿ ಏಕರೂಪತೆ ಸಾಧಿಸಲು ಸಾಧ್ಯವಾಗಿಲ್ಲ. ಮಲಪ್ರಭಾ ಕುಡಿಯುವ ನೀರಿನ ಯೋಜನೆಯ 2ನೇ ಹಂತವು ಮುಕ್ತಾಯವಾದ ನಂತರ ಈ ಪರಿಸ್ಥಿತಿಯು ಸುರಿಸುವ ಸಾಧ್ಯತೆ ಇದೆ.

ವಿಷಯ :- ಧಾರವಾಡದಲ್ಲಿ ಆರ್ಟ್ ಗ್ಯಾಲರಿ ಕಟ್ಟುವ ಬಗ್ಗೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2351 (376) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಶ್ರೀ ಮತಿ ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :-

ಅ) ಧಾರವಾಡ ಎರಡು ವಿಶ್ವವಿದ್ಯಾನಿಲಯ ಪಡೆದ ನಗರ ಹಾಗೂ ಸುಶಿಕ್ಷಿತರ ಸುಸಂಸ್ಕೃತ ನಗರ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈಗ ನಗರದ ಜನತೆಯ ಹಾಗೂ ಕಲಾವಿದರ ಅಗತ್ಯತೆಯಾದ ಆರ್ಟ್ ಗ್ಯಾಲರಿ ಬೇಕೆಂದು ಬಹು ವರ್ಷಗಳ ಬೇಡಿಕೆಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ?